2017 ಕ.ತೀ.ವ. 180

## ಸನ್ಮಾನ್ಯ ನ್ಯಾಯಮೂರ್ತಿ ಎಚ್.ಜಿ. ರಮೇಶ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್

## ಎಲ್. ಜಗದೀಶ್ –ವಿರುದ್ಧ– ಜಿಲ್ಲಾಧಿಕಾರಿಗಳು (ಆಹಾರ), ದಾವಣಗೆರೆ ಜಿಲ್ಲೆ, ದಾವಣಗೆರೆ *

**ಅನುಕಂಪದ ಆಧಾರದ ಮೇಲೆ ನ್ಯಾಯಬೆಲೆ ಅಂಗಡಿಯನ್ನು ನಡೆಸಲು ಅಧಿಕಾರವನ್ನು ಹಸ್ತಾಂತರಿಸುವಂತೆ ದತ್ತು ಮಗನು ಮಾಡಿರುವ ಕ್ಲೇಮು ಊರ್ಜಿತವೇ? ಎಂದು ಏಕಸದಸ್ಯ ಪೀಠವು ಸ್ಪಷ್ಟೀಕರಣ ಕೋರಿರುವ ಪ್ರಶ್ನೆಯನ್ನು ದ್ವಿಸದಸ್ಯ–ಪೀಠದ ಅವಗಾಹನೆಗಾಗಿ ಸಲ್ಲಿಸಿದ್ದು, ಆ ಪ್ರಶ್ನೆಯನ್ನು ದ್ವಿ–ಸದಸ್ಯ ಪೀಠವು ಬಗೆಹರಿಸಬೇಕಿದೆ. ನಿಯಂತ್ರಣ ಆದೇಶ ಕಂಡಿಕೆ 13ರಂತೆ ದತ್ತು ಪುತ್ರನನ್ನು 'ಪುತ್ರ' ಎಂಬ ಪರಿಭಾಷೆಯಿಂದ ತೆಗೆದುಹಾಕಲಾಗಿಲ್ಲ. ಈ ಕಾರಣದಿಂದ 1992ರ ಕರ್ನಾಟಕ ಅವಶ್ಯಕ ವಸ್ತುಗಳ ನಿಯಂತ್ರಣ ಆದೇಶ (ಸಾರ್ವಜನಿಕ ವಿತರಣಾ ಪದ್ಧತಿ) ಕಂಡಿಕೆ 13ರಡಿಯಲ್ಲಿ ದತ್ತು ಪುತ್ರನು ನ್ಯಾಯಬೆಲೆ ಅಂಗಡಿಯನ್ನು ನಡೆಸಲು ಅಧಿಕಾರವನ್ನು ಅನುಕಂಪದ ಆಧಾರದ ಮೇಲೆ ಹಸ್ತಾಂತರಿಸುವಂತೆ ಸಲ್ಲಿಸಿದ್ದ ಅರ್ಜಿಯು ಊರ್ಜಿತವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಪರಾಮರ್ಶೆಯನ್ನು ಬಗೆಹರಿಸಿದೆ.**

*ಉಲ್ಲೇಖಿಸಲಾದ ಮೊಕದ್ದಮೆಗಳು:* **ಪ್ಯಾರಾದಲ್ಲಿ**

*1. ಡಬ್ಲ್ಯು ಪಿ.ಸಂ.8879/2013 (ದಿನಾಂಕ: 7.11.2013)*
*ಶ್ರೀ ಶಿವಕುಮಾರ್ –ವಿರುದ್ಧ– ಜಿಲ್ಲಾಧಿಕಾರಿಗಳು (ಉಲ್ಲೇ) 2*

* ರಿಟ್ ಅರ್ಜಿ ಸಂಖ್ಯೆ.: 1008/2015, (ಜಿಎಂ–ಪಿಡಿಎಸ್) ದಿನಾಂಕ: 25ನೇ ನವೆಂಬರ್, 2016.

*2. ಐಎಲ್‌ಆರ್ 2014 ಕೆಎಆರ್ 169*
*ಎಸ್. ಬಾಲಕೃಷ್ಣ ರೆಡ್ಡಿ –ವಿರುದ್ಧ– ಕಾರ್ಯದರ್ಶಿಗಳು (ಉಲ್ಲೇ) 2*

ಅಪೀಲುದಾರರ ಪರ : ಶ್ರೀ ಎಚ್.ಸಿ. ಶಿವರಾಮು ಮತ್ತು
ಶ್ರೀ ಹೆಚ್.ಆರ್. ಹರ್ಷಕುಮಾರ್ ಗೌಡ, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಎ.ಜಿ. ಶಿವಣ್ಣ, ಎಎಜಿ ಇವರ ಜೊತೆಯಲ್ಲಿ
ಶ್ರೀ ಕಿರಣ್‌ಕುಮಾರ್ ಟಿ.ಎಲ್.
ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎಚ್.ಜಿ. ರಮೇಶ್(ಮೌಖಿಕ)** :

1. ಈ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು, ವಿಭಾಗೀಯ ಪೀಠದ ಅಭಿಪ್ರಾಯಕ್ಕಾಗಿ ಈ ಮುಂದಿನ ಕಾನೂನಿನ ಪ್ರಶ್ನೆಯನ್ನು ಉಲ್ಲೇಖಿಸಿರುತ್ತಾರೆ; ಹಾಗಾಗಿ, ವಿಷಯವನ್ನು ಈ ವಿಭಾಗೀಯ ಪೀಠದ ಮುಂದೆ ಮಂಡಿಸಲಾಗಿರುತ್ತದೆ.

> "ಅನುಕಂಪದ ಆಧಾರದ ಮೇಲೆ ನ್ಯಾಯಬೆಲೆ ಅಂಗಡಿಯನ್ನು ನಡೆಸುವ ಅಧಿಕಾರದ ವರ್ಗಾವಣೆಗೆ ಸಂಬಂಧಿಸಿದಂತೆ ದತ್ತುಪುತ್ರನು ಮಾಡಿರುವ ಕ್ಲೇಮು ಊರ್ಜಿತವಾದುದೆ?"

ಮೇಲೆ ಹೇಳಿದ ಪ್ರಶ್ನೆಯನ್ನು ಈ ಮುಂದಿನಂತೆ ಮತ್ತೊಂದು ರೀತಿಯಲ್ಲಿ ಕೇಳಿಕೊಳ್ಳಬಹುದು:

"ಕರ್ನಾಟಕ ಅವಶ್ಯಕ ಸರಕುಗಳ (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ, 1992ರ 13ನೇ ಖಂಡದ ಪರಂತುಕದಲ್ಲಿ ಉಲ್ಲೇಖಿಸಿರುವ 'ಮಗ' ಎಂಬ ಪದವು 'ದತ್ತುಮಗ' ನನ್ನು ಒಳಗೊಳ್ಳುತ್ತದೆಯೇ?"

2. ***ಶ್ರೀ ಶಿವಕುಮಾರ್ –ವಿರುದ್ಧ– ಜಿಲ್ಲಾಧಿಕಾರಿಗಳು*** [1] ಮತ್ತು ***ಎಸ್.ಬಾಲಕೃಷ್ಣ ರೆಡ್ಡಿ –ವಿರುದ್ಧ– ಕಾರ್ಯದರ್ಶಿಗಳು*** [2] ಪ್ರಕರಣಗಳಲ್ಲಿ ಈ ನ್ಯಾಯಾಲಯದ ಎರಡು ಮಾನ್ಯ ದ್ವಿ–ಸದಸ್ಯ ಪೀಠದ ನ್ಯಾಯಾಧೀಶರುಗಳು ಎರಡು ವಿಭಿನ್ನ ತೀರ್ಪುಗಳನ್ನು ನೀಡಿರುವುದರಿಂದ ಈ ಉಲ್ಲೇಖವನ್ನು ಮಾಡಲಾಗಿದೆ. ***ಶ್ರೀ ಶಿವಕುಮಾರ್*** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು, ಕರ್ನಾಟಕ ಅವಶ್ಯಕ ಸರಕುಗಳು (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ, 1992 (ಸಂಕ್ಷಿಪ್ತವಾಗಿ 'ನಿಯಂತ್ರಣ ಆದೇಶ' ಎಂದು ಕರೆಯಲಾಗಿದೆ)ರ 13ನೇ ಖಂಡದ ಪರಂತುಕದಲ್ಲಿ ಉಲ್ಲೇಖಿಸಿರುವ 'ಮಗ' ಎಂಬ ಪದಾವಳಿಯು, ಪಕ್ಷಕಾರರ ವೈಯಕ್ತಿಕ ಕಾನೂನು 'ದತ್ತು'ವನ್ನು ಅನುಮತಿಸಿದಲ್ಲಿ ದತ್ತು ಪುತ್ರ ಪರಿಭಾಷೆಯು ಒಳಗೊಳ್ಳುತ್ತದೆ ಹಾಗೂ 'ದತ್ತು'ವು ಕಾನೂನಿನಲ್ಲಿ ಸಿಂಧುವಾದುದಾಗಿರುತ್ತದೆಂದು ಅಭಿಪ್ರಾಯಪಡಲಾಗಿರುತ್ತದೆ. ***ಎಸ್. ಬಾಲಕೃಷ್ಣ ರೆಡ್ಡಿ*** (ಈ ಹಿಂದೆ ಹೇಳಿದ) ಪ್ರಕರಣದಲ್ಲಿ, ಮೇಲೆ ಹೇಳಿದ ಪರಂತುಕದಲ್ಲಿ ಉಲ್ಲೇಖಿಸಿದ 'ಮಗ' ಪದಾವಳಿಯು 'ದತ್ತು ಮಗ' ಎಂಬ ಪದಾವಳಿಯನ್ನು ಒಳಗೊಳ್ಳುವುದಿಲ್ಲ.

3. ಉಲ್ಲೇಖಿಸಿದ ಪ್ರಶ್ನೆಯನ್ನು ಪರಿಶೀಲಿಸಲು, ನಿಯಂತ್ರಣ ಆದೇಶದ 13ನೇ ಖಂಡವನ್ನು ಉಲ್ಲೇಖಿಸುವುದು ಅವಶ್ಯಕವಾಗಿದ್ದು, ಅದು ಈ ಮುಂದಿನಂತಿರುತ್ತದೆ:

---

1. ಡಬ್ಲ್ಯು ಪಿ.ಸಂ.8879/2013 (ದಿನಾಂಕ: 7.11.2013)

2. ಐಎಲ್‌ಆರ್ 2014 ಕೆಎಆರ್ 169

> "13. **ಅಧಿಕಾರ ವರ್ಗಾವಣೆಯ ನಿಷೇಧ.**– ಯಾರೇ ಅಧಿಕೃತ ಡೀಲರನು, ಯಾರೇ ಇತರೆ ವ್ಯಕ್ತಿಗೆ ತನ್ನ ಅಧಿಕಾರವನ್ನು ವಹಿಸತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ ಮತ್ತು ಯಾರೇ ವ್ಯಕ್ತಿಯು, ವರ್ಗಾವಣೆ ಪಡೆದವನಂತೆ ಅಥವಾ ಅನ್ಯಥಾ ಯಾರೇ ಅಂಥ ಅಧಿಕೃತ ಡೀಲರನ ಪರವಾಗಿ ವ್ಯವಹಾರವನ್ನು ಮುಂದುವರೆಸತಕ್ಕದ್ದಲ್ಲ.
>
> ಪರಂತು, ಅಧಿಕೃತ ಪ್ರಾಧಿಕಾರವು, ಅಧಿಕೃತ ಡೀಲರನು ಮರಣ ಹೊಂದಿದ ಸಂದರ್ಭದಲ್ಲಿ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಆತನ/ಳ ಪತಿ/ಪತ್ನಿ ಅಥವಾ ಮಗ ಅಥವಾ ಅವಿವಾಹಿತ ಮಗಳಿಗೆ ಅಂಥ ವರ್ಗಾವಣೆಗೆ ಸಂಬಂಧಿಸಿದ ಆದೇಶವನ್ನು ಮಾಡಬಹುದು."
>
> (ಅಡಿಗೆರೆ ಎಳೆದಿರುವುದಕ್ಕೆ ನನ್ನಿಂದ ಒತ್ತು ನೀಡಲಾಗಿರುತ್ತದೆ)

4. ಉಲ್ಲೇಖಿಸಿದ ಪ್ರಶ್ನೆಯ ಹಿನ್ನೆಲೆಯಲ್ಲಿ, ಸಾಮಾನ್ಯ ಖಂಡಗಳ ಅಧಿನಿಯಮ, 1897ರ 3(57)ನೇ ಪ್ರಕರಣದಲ್ಲಿ ಪರಿಭಾಷಿಸಿರುವ 'ಮಗ' ಪದಾವಳಿಗೆ ನಾವು ಉಲ್ಲೇಖವನ್ನು ಮಾಡಬಹುದಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿದೆ:

> 'ಮಗ' ಎಂಬ ಪದಾವಳಿಯ ಪರಿಭಾಷೆಯು, ಯಾರ ವೈಯಕ್ತಿಕ ಕಾನೂನು ದತ್ತುವನ್ನು ಅನುಮತಿಸುತ್ತದೆಯೋ ಅಂಥ ಯಾವುದೇ ಸಂದರ್ಭದಲ್ಲಿ ದತ್ತು ಮಗನನ್ನು ಒಳಗೊಳ್ಳತಕ್ಕದ್ದು;

ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 3(38)ನೇ ಪ್ರಕರಣದಲ್ಲಿ ನೀಡಲಾದ 'ಮಗ' ಪದಾವಳಿಯ ಪರಿಭಾಷೆಯ ಮೇಲೆ ಉದ್ಧರಿಸಿದ ಭಾಗಕ್ಕೆ ಆನುಷಂಗಿಕವಾಗಿರುತ್ತದೆ.

5. ಯಾವುದೇ ವ್ಯಕ್ತ ಸೇರ್ಪಡೆ ಇಲ್ಲದಿರುವಲ್ಲಿ, ದತ್ತು ಮಗನನ್ನು ಕಾನೂನಿನ ಪ್ರಕಾರ ಸಿಂಧುವಾಗಿ ಏಕೆ ದತ್ತು ತೆಗೆದುಕೊಳ್ಳಲಿಲ್ಲವೆಂಬುದಕ್ಕೆ ಯಾವುದೇ ಕಾರಣವಿಲ್ಲದಿರುವುದನ್ನು ನಿಯಂತ್ರಣ ಆದೇಶದ 13ನೇ ಖಂಡಕ್ಕೆ ಉಲ್ಲೇಖಿಸಿದ 'ಮಗ' ಎಂಬ ವ್ಯಾಪ್ತಿಯಿಂದ ಹೊರತುಪಡಿಸತಕ್ಕದ್ದು. ನಿಯಂತ್ರಣ ಆದೇಶದ 13ನೇ ಖಂಡದಲ್ಲಿ ಉಲ್ಲೇಖಿಸಿದ 'ಮಗ' ಎಂಬ ಪದದ ವ್ಯಾಪ್ತಿಯಿಂದ 'ದತ್ತು ಮಗ' ಎಂಬ ಪದವನ್ನು ಹೊರತುಪಡಿಸಿದುದರಿಂದ, 'ಮಗ' ಎಂಬ ಪದವನ್ನು ಪಕ್ಷಕಾರರ ವೈಯಕ್ತಿಕ ಕಾನೂನನ್ನು ವಿಫಲಗೊಳಿಸುವಂತೆ ಪರಿಭಾಷಿಸುವಂತಿಲ್ಲ. ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಆದೇಶದ 13ನೇ ಖಂಡದ ಉದ್ದೇಶಕ್ಕೆ ಸಂಬಂಧಿಸಿದಂತೆ, 'ಮಗ' ಪದಾವಳಿಯು, ಪಕ್ಷಕಾರರ ವೈಯಕ್ತಿಕ ಕಾನೂನು ದತ್ತುವನ್ನು ಅನುಮತಿಸಿದಲ್ಲಿ ದತ್ತುಮಗ ಒಳಗೊಳ್ಳತಕ್ಕದ್ದು ಹಾಗೂ ದತ್ತುವು ಕಾನೂನಿನಲ್ಲಿ ಸಿಂಧುವಾದುದಾಗಿರುತ್ತದೆ.

6. ***ಎಸ್. ಬಾಲಕೃಷ್ಣ ರೆಡ್ಡಿ*** (ಮೇಲೆ ಹೇಳಿದ) ಪ್ರಕರಣದಲ್ಲಿ, ಮಾನ್ಯ ಏಕ ಸದಸ್ಯ ನ್ಯಾಯಪೀಠದ ನ್ಯಾಯಾಧೀಶರು, ನಿಯಂತ್ರಣ ಆದೇಶದ 13ನೇ ಖಂಡದಲ್ಲಿ ಉಲ್ಲೇಖಿಸಿದ 'ಮಗ' ಪದಾವಳಿಯು ದತ್ತು ಮಗ ಎಂಬ ಪರಿಕಲ್ಪನೆಯನ್ನು ಒಳಗೊಳ್ಳತಕ್ಕದ್ದಲ್ಲವೆಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ, ಸದರಿ ನಿಯಮಗಳಡಿಯಲ್ಲಿನ ನೇಮಕಾತಿಗೆ ಸಂಬಂಧಿಸಿದಂತೆ ದತ್ತುಮಗ ಅಥವಾ ದತ್ತು ಮಗಳು ಅರ್ಹರಾಗತಕ್ಕದ್ದಲ್ಲವೆಂದು ಪ್ರಸ್ತಾಪಿಸುವಂಥ ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ 3(3)ನೇ ನಿಯಮವನ್ನು ಉದಾಹರಿಸಿರುತ್ತಾರೆ. ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಆದೇಶದಲ್ಲಿ ಇಂಥ ಹೊರತುಪಡಿಸುವಿಕೆ ಇಲ್ಲದಿರುವುದರಿಂದ ವಿಶ್ಲೇಷಣೆಯು ಸರಿಯಾದುದಾಗಿರುವುದಿಲ್ಲ.

7. ಮೇಲೆ ಹೇಳಿದ ಕಾರಣಗಳಿಗಾಗಿ, ***ಶ್ರೀ ಶಿವಕುಮಾರ್*** (ಮೇಲೆ ಹೇಳಿದ) ಪ್ರಕರಣದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯವನ್ನು ಒಪ್ಪಿಕೊಂಡು, ಇದಕ್ಕೆ ವಿರುದ್ಧವಾಗಿ ***ಎಸ್. ಬಾಲಕೃಷ್ಣರೆಡ್ಡಿ*** ಪ್ರಕರಣದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ತಳ್ಳಿ ಹಾಕಲಾಗಿರುತ್ತದೆ. ತದನುಸಾರವಾಗಿ, ಈ ವಿಭಾಗೀಯ ಪೀಠಕ್ಕೆ ಉಲ್ಲೇಖಿಸಿರುವ ಪ್ರಶ್ನೆಗೆ ಈ ಮುಂದಿನಂತೆ ಉತ್ತರಿಸಲಾಗಿರುತ್ತದೆ.

ನ್ಯಾಯಬೆಲೆ ಅಂಗಡಿ ನಡೆಸುವ ಅಧಿಕಾರದ ವರ್ಗಾವಣೆಗೆ ಸಂಬಂಧಿಸಿದಂತೆ ದತ್ತು ಮಗ ಮಾಡಿರುವ ಕ್ಲೇಮು ಪಕ್ಷಕಾರರ ವೈಯಕ್ತಿಕ ಕಾನೂನು ದತ್ತುವನ್ನು ಅನುಮತಿಸಿದಲ್ಲಿ ಕರ್ನಾಟಕ ಅವಶ್ಯಕ ಸರಕುಗಳು (ಸಾರ್ವಜನಿಕ ವಿತರಣಾ ವ್ಯವಸ್ಥೆ) ನಿಯಂತ್ರಣ ಆದೇಶ, 1992ರ 13ನೇ ಖಂಡದಡಿಯಲ್ಲಿ ಊರ್ಜಿತವಾಗಿರುತ್ತದೆ ಹಾಗೂ ದತ್ತುವು ಕಾನೂನಿನಲ್ಲಿ ಸಿಂಧುವಾದುದಾಗಿರುತ್ತದೆ.

8. ರಿಜಿಸ್ಟರಿಯು, ಸರದಿ ಪಟ್ಟಿಯನ್ನು ಹೊಂದಿರುವ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಈ ರಿಟ್ ಅರ್ಜಿಯನ್ನು ಪಟ್ಟಿ ಮಾಡತಕ್ಕದ್ದು.